**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -204-2017**
**ಚಾಸಾ - 04 / ಪ್ರಾಸಾ - 02**

| | |
|---|---|
| ಹೆಸರು | **ವಿನೋದ್ ಕುಮಾರ್** |
| ತಂದೆಯ ಹೆಸರು | **ಎನ್ ಕುಮಾರ್** |
| ವಯಸ್ಸು | **35** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ಬೆಂಗಳೂರು** |

**ದಿನಾಂಕ:13-06-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದಿ.13-08-2016 ರಂದು ಬೆಳಗ್ಗೆ 8.30 ರಿಂದ 9.30 ರ ಸಮಯದಲ್ಲಿ ತಾವರೆಕೆರೆಯಲ್ಲಿ ಪಂಚನಾಮೆಯನ್ನು ಮಾಡುವ ಸಮಯದಲ್ಲಿ ನಾನು ನಿಪಿ-1 ಕ್ಕೆ ಸಹಿಯನ್ನು ಹಾಕಿರುತ್ತೇನೆ. ಚಾಸಾ-2 ರವರಿಗೆ ಮಚ್ಚಿನಿಂದ ಹೊಡೆದಿರುವ ವಿಷಯಕ್ಕೆ ಸಂಬಂಧಿಸಿದಂತೆ ಪಂಚನಾಮೆಯನ್ನು ಮಾಡಿದರು. ನಿಪಿ-1 ಕ್ಕೆ ನನ್ನ ಜೊತೆ ಚಾಸಾ-1 ಮತ್ತು 5 ರವರು ಸಹಿಯನ್ನು ಮಾಡಿರುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಒಂದು ಮಚ್ಚನ್ನು ವಶಪಡಿಸಿಕೊಂಡರು. ಈಗ ಸಾಕ್ಷಿಗೆ ಮುದ್ದೆ ಮಾಲು-1 ನ್ನು ತೋರಿಸಿದ್ದು, ಅದನ್ನು ಪಂಚನಾಮೆ ಮಾಡುವ ಸಮಯದಲ್ಲಿ ವಶಪಡಿಸಿಕೊಂಡಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ**

**ಮಾಹಿತಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನಿಪಿ-1 ರಂತೆ ಪಂಚನಾಮೆಯನ್ನು ಯಲಚಗುಪ್ಪೆ ಗ್ರಾಮದ ಬಳಿ ಇರುವ ಸಾಬರ ಪಾಳ್ಯದಲ್ಲಿ ಇರುವ ವಿಜಯ ಫಾರಂ ಹೌಸ್ ನ ಬಳಿ ಸರ್ವೆ ನಂ. 161 ನ್ನು ಪಂಚನಾಮೆಯನ್ನು ಮಾಡಿ ನಿಮ್ಮಿಂದ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀ.ಜಿ. ಹೆಚ್. ಎಂ , ವಕೀಲರಿಂದಃ-**

01. ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ನನಗೆ ಸಂಪೂರ್ಣವಾದ ಮಾಹಿತಿ ಇದೆ. ಪಂಚನಾಮೆಗೆ ಸಹಕರಿಸುವಂತೆ ಹೇಳಿ ಪೋಲೀಸರು ನನಗೆ ನೋಟಿಸ್ ನ್ನು ನೀಡಿದರು. ಸದರಿ ನೋಟಿಸ್ ಗೆ ನನ್ನ ಸಹಿಯನ್ನು ಹಾಕಿ ಪಡೆದುಕೊಂಡಿರುತ್ತೇನೆ. ದಿ.11-08-2016 ರಂದು ನಡೆದಿರುವ ಗಲಾಟೆಗೆ ಸಂಬಂಧಿಸಿದಂತೆ ನಿಪಿ-1 ರಂತೆ ಪಂಚನಾಮೆಯನ್ನು ಮಾಡಲಾಗಿದೆ. ಗಲಾಟೆಯು ಯಾವ ಸ್ಥಳದಲ್ಲಿ ನಡೆದಿತ್ತು ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಸುಮಾರು 6 ಜನರು ಇದ್ದರು. ಅವರ ಪೈಕಿ ನಾನು, ಚಾಸಾ-1 ಮತ್ತು 3 ಮತ್ತು ಪೋಲೀಸರು ಇದ್ದರು. ಪಂಚನಾಮೆಯನ್ನು ಮಾಡಲು ಪಿ. ಎಸ್.ಐ ಮತ್ತು ಪೇದೆಯವರು ಬಂದಿದ್ದರು ಮತ್ತು ಅವರ ಹೆಸರು ನನಗೆ ಗೊತ್ತಿಲ್ಲ.

02. ನಿಪಿ-1 ರಲ್ಲಿ ಚೆಕ್ಕುಬಂಧಿಯ ಬಗ್ಗೆ ನಮೂದಿಸಿರುವ ಬಗ್ಗೆ ನನಗೆ ನೆನಪಿಲ್ಲ. ಮುದ್ದೆ ಮಾಲು-1 ನ್ನು ಆರೋಪಿಯು ಪೋಲೀಸರಿಗೆ ನೀಡಿರುತ್ತಾರೆ. ಮುದ್ದೆ ಮಾಲು-1 ನ್ನು ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿಯೂ ಉಪಯೋಗಿಸುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-2 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ

ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪೋಲೀಸರು ಕೃತ್ಯ ನಡೆದ ಸ್ಥಳಕ್ಕೆ ಹೋಗಿಲ್ಲ, ನಿಪಿ-2 ರಂತೆ ಪಂಚನಾಮೆಯನ್ನು ಮಾಡಿಲ್ಲ ಮತುತ ಮುದ್ದೆ ಮಾಲು-1 ನ್ನು ವಶಪಡಿಸಿಕೊಂಡಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-1 ಕ್ಕೆ ನಾನು ಶೆಡ್ಡಿನ ಹತ್ತಿರ ಸಹಿಯನ್ನು ಮಾಡಿರುತ್ತೇನೆ. ನಿಪಿ-1 ಕ್ಕೆ ನೀವು ಠಾಣೆಯಲ್ಲಿ ಸಹಿಯನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**